S. C. No.22/2021
PW.04

**ದೋ.ಸಾ. : 14 ಪ್ರಾ.ಸಾ. : 04**

**ದಿನಾಂಕಃ 30-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಎಲ್.ಎ.ಡಿ.ಸಿ. ವಕೀಲರಿಂದ**

11. ನಮ್ಮ ಮನೆಯ ಸಾಲಿನಲ್ಲಿ 5 ಮನೆಗಳು ಇರುತ್ತವೆ. ಸದರಿ ಮನೆಗಳಲ್ಲಿ ಒಂದು ನಮ್ಮ ಮನೆ, ಮತ್ತೊಂದು ಆರೋಪಿ ಮನೆ ಹಾಗೂ ಉಳಿದ ಮೂರು ಮನೆಗಳು ಸಲೀಂ, ಆಸ್ವಾಕ್ ಮತ್ತು ಅಲಿ ಎನ್ನುವವರದು ಇರುತ್ತದೆ. ಚಾಸಾ-2 ರವರು ನನ್ನ ಸಂಬಂಧಿಕನಲ್ಲ. ಚಾಸಾ-11 ನನ್ನ ಸಂಬಂಧಿಕರು ಎಂದರೆ ಸರಿ. ಚಾಸಾ-9 ರವರು ನನಗೆ ಗೊತ್ತಿಲ್ಲ. ಚಾಸಾ-12 ರವರು ನನ್ನ ಮೈದುನ. ಚಾಸಾ-13, 16, 18, 22, 23, 24, 26 ರವರು ನನ್ನ ಸಂಬಂಧಿಕರು ಹಾಗೂ ಪರಿಚಯದವರು ಎಂದರೆ ಸರಿಯಲ್ಲ. ಚಾಸಾ-15 ರವರು ಚಾಸಾ-10 ರವರ ಗಂಡ, ಚಾಸಾ-20 ರವರು ಚಾಸಾ-10 ರವರ ತಮ್ಮ. ಚಾಸಾ-21 ರವರು ಚಾಸಾ-10 ರವರ ತಂಗಿಯ ಗಂಡ. ಚಾಸಾ-25 ರವರು ನನ್ನ ಅಕ್ಕ.

12. ನಮ್ಮ ಮನೆಯ ಮುಂದೆ ರಸ್ತೆಯಿದ್ದು, ರಸ್ತೆಯ ಮೇಲೆ ಜನರು ಓಡಾಡುತ್ತಾರೆ ಎಂದರೆ ಸರಿ. ನಮ್ಮ ಊರಿನಲ್ಲಿ ಬಹಳಷ್ಟು ಜನ ಹಿರಿಯರು ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮನೆ ಮೇಲ್ಗಡೆ ಇದ್ದು, ನಮ್ಮ ಮನೆಯಿಂದ 300 ಮೀಟರ್ ದೂರದಲ್ಲಿ ಕೆಳಗೆ ಮಸೀದಿ ಇರುತ್ತದೆ.ಸದರಿ ಮಸೀದಿಗೆ ಹೋಗಲು ಬೇರೊಂದು ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ಕೇರಿಯ ಜನರು ಸದರಿ ರಸ್ತೆಯಿಂದ ಮಸೀದಿಗೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಬೇರೆ ಕೇರಿಯ ಜನರು ಮಸೀದಿಗೆ ಹೋಗಲು ಬೇರೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ಇದೇ ರಸ್ತೆಯಿಂದ ಹೋಗುತ್ತಾರೆ ಎಂದು ನುಡಿಯುತ್ತಾರೆ. ಮಸೀದಿಗೆ ಹೋಗಲು ಬೇರೆ ರಸ್ತೆ ಇಲ್ಲ ಎಂದರೆ ಬೇರೆ ರಸ್ತೆಯಿದ್ದು, ಅದು ದೂರವಾಗುವ ಕಾರಣ, ಎಲ್ಲರೂ ನಮ್ಮ ಮನೆಯ ಮುಂದಿನ ರಸ್ತೆಯಿಂದ ಮಸೀದಿಗೆ ಹೋಗುತ್ತಾರೆ ಎಂದು ನುಡಿಯುತ್ತಾರೆ.

13. ನಾನು ಪಂಚಾಯತಿಯ ಸದಸ್ಯಳಲ್ಲ. ನಾನು ದ್ವಿತಿಯ ಪಿ.ಯು.ಸಿ ವರೆಗೆ ಓದಿರುತ್ತೇನೆ. ನಾನು ಆರೋಪಿಯ ವಿರುದ್ಧ ದೂರನ್ನು ನೀಡುವ ಮೊದಲು ಬೇರೆ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ಜಮಾತ್ ನಿಂದಲೂ ಸಹ ಆರೋಪಿ ವಿರುದ್ಧ ಬೇರೆ ಯಾವುದೇ ದೂರು ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ಧ ನೀಡಿದ ದೂರಿನಲ್ಲಿಯೂ ಸಹ "ಆರೋಪಿ ನಮ್ಮ ಮನೆಯ ಕಿಟಕಿಯನ್ನು ಬಡಿಯುವುದು ಹಾಗೂ ತೆರೆಯುವುದು,

ಕಿಟಕಿಯಿಂದ ಇಣಕಿ ನೋಡುವುದು, ಬ್ಯಾಟರಿ ಬೆಳಕನ್ನು ಬಿಡುವುದು, ಕೈ ಸನ್ನೆ ಮಾಡುವುದು, ಕಣ್ಣು ಹೊಡೆಯುವುದು, ಕಿಸ್ ಮಾಡುವಂತೆ ಸನ್ನೆ ಮಾಡುವುದು, ತನ್ನ ಲುಂಗಿಯನ್ನು ಎತ್ತಿ ತನ್ನ ಗುಪ್ತಾಂಗವನ್ನು ತೋರಿಸುವುದು, ಅಸಭ್ಯವಾಗಿ ವರ್ತಿಸುವುದು ಮಾಡುತ್ತಿದ್ದ ಹಾಗೂ ನನಗೆ ತೊಂದರೆ ಕೊಡುತ್ತಿದ್ದ. ನಾನು ಕಿಟಕಿ ಬಳಿ ಯಾರು ಎಂದು ನೋಡಲು ಹೋದಾಗ, ಆತ ಅಲ್ಲಿಂದ ಓಡಿ ಹೋಗುತ್ತಿದ್ದ" ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ನಾನು ಪೊಲೀಸರ ಮುಂದೆ ಸಹ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪೊಲೀಸರು ಮುಂದೆ ಹೇಳದೆ ಇದೇ ಪ್ರಥಮ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಾನು ರಸ್ತೆಯಲ್ಲಿ ಕಾಂಟ್ರ್ಯಾಕ್ಟರ್ ದಾರನಾದ ಅಸಿಪ್ ಅಲಿಯ ಜೊತೆ ಮಾತನಾಡುತ್ತಿದ್ದ ಹಾಗೂ ಆತನ ಹೆಸರನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ನೀಡಿದ ದೂರಿನಲ್ಲಿ ಕಾಂಟ್ರ್ಯಾಕ್ಟರ್ ದಾರನ ಹೆಸರನ್ನು ನಮೂದಿಸಿದ ಬಗ್ಗೆ ನನಗೆ ನೆನಪಿಲ್ಲ. ಆರೋಪಿಯು ನಮಗೆ ಚಾಕುವನ್ನು ತೋರಿಸಿ ಹೆದರಿಸುತ್ತಿದ್ದ ಎಂಬ ವಿಷಯವನ್ನು ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ. ಈ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳದೆ ಇದ್ದರೂ ಸಹ ಹೇಳಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಅಬುತಾಲಿಬ್ ರವರು ಆರೋಪಿಯ ವಿರುದ್ಧ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ನಮ್ಮ ಮನೆಯ ಮುಂದಿನ ರಸ್ತೆ, ಕಚ್ಚಾ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಚೂಪಾದ ಕಲ್ಲುಗಳು ಇರುತ್ತವೆ ಎಂದರೆ ಸಾಕ್ಷಿಯು ಸಣ್ಣ-ಸಣ್ಣ ಕಲ್ಲುಗಳು ಇರುತ್ತವೆ ಆದರೆ ಚೂಪಾಗಿರುವುದಿಲ್ಲ ಎಂದು ನುಡಿಯುತ್ತಾರೆ.

15. ನಮ್ಮ ಮನೆಯ ಮುಂದುಗಡೆ ಯಾವುದೇ ತೆಂಗಿನ ಮರಗಳು ಇರುವುದಿಲ್ಲ. ಆರೋಪಿ ಮನೆ ಮತ್ತು ನಮ್ಮ ಮನೆಯ ನಡುವೆ ಆರೋಪಿಗೆ ಸೇರಿದ ತೆಂಗಿನ ಮರಗಳು ಇರುತ್ತವೆ. ನಮ್ಮಿಬ್ಬರ ಮನೆಗಳ ನಡುವೆ ತೆಂಗಿನ ಮರಗಳು ಹಾಗೂ ಗಿಡಗಳು ಇರುವ ಕಾರಣ ನಮ್ಮ ಮನೆಯಿಂದ ಆರೋಪಿಯ ಮನೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾದ ದಿನ ಅಬುತಾಲಿಬ್ ರವರು ತಮ್ಮ ಹೆಂಡತಿ ಹಾಗೂ ಮಕ್ಕಳೊಂದಿಗೆ ಮದ್ಯಾಹ್ನ 01-00 ಗಂಟೆ ಸಮಯದಲ್ಲಿ ನಮ್ಮ ಮನೆಯ ಹತ್ತಿರ ಬಂದಿರುತ್ತಾರೆ. ಅಬುತಾಲಿಬ್ ರವರು ನಮ್ಮ ಮನೆಯ ಹತ್ತಿರ ಬಂದಾಗ ನಾವೆಲ್ಲರೂ ಚರ್ಚೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಮನೆಯ

ಮುಂದುಗಡೆ ರಸ್ತೆಯ ಮೇಲೆ ಆರೋಪಿ ಸಿಕ್ಕಿದ್ದು, ಅಬುತಾಲಿಬ್ ರವರು ಆರೋಪಿಗೆ ನೀನು ಯಾಕೆ ಹೀಗೆಲ್ಲಾ ಮಾಡುತ್ತೀಯಾ? ಎಂದು ಕೇಳಿರುತ್ತಾರೆ. ಅಬುತಾಲಿಬ್ ರವರು ಆರೋಪಿಗೆ ಏನನ್ನು ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನಮ್ಮ ಮನೆಯ ಕಂಪೌಂಡಿನಲ್ಲಿ ನಿಂತು ನೋಡುತ್ತಿದ್ದೆ ಎಂದು ನುಡಿಯುತ್ತಾರೆ. ಅವರು ಮಾತನಾಡುತ್ತಿದ್ದ ಜಾಗ, ನಾನು ನಿಂತುಕೊಂಡ ಜಾಗದಿಂದ ಅಂದಾಜು 10 ಅಡಿ ದೂರದಲ್ಲಿರುತ್ತದೆ. ಅವರು ನಿಂತುಕೊಂಡು ಮಾತನಾಡುತ್ತಿದ್ದ ಜಾಗ ನಮ್ಮ ಮನೆಯ ಮುಂದುಗಡೆ ಆಗಿರುತ್ತದೆ. ಆರೋಪಿಯೊಂದಿಗೆ ಮಾತನಾಡಲು ಅಬುತಾಲಿಬ್ ರವರು ಮುಂದೆ ಹೋಗಿರುತ್ತಾರೆ. ಆರೋಪಿ ಹಾಗೂ ಅಬುತಾಲಿಬ್ ರವರ ನಡುವೆ ಮಾತುಕತೆಯಾಗುವ ಸಮಯದಲ್ಲಿ, ಅಲ್ಲಿ ಬಹಳಷ್ಟು ಜನರು ಸೇರಿದ್ದರು. ಅಲ್ಲಿ ಬಹಳಷ್ಟು ಜನರು ಸೇರಿದ್ದರಿಂದ, ಅಲ್ಲಿ ಅವರಿಬ್ಬರ ನಡುವೆ ಆದ ಮಾತುಕತೆ ನನಗೆ ಕೇಳಿಸುತ್ತಿರಲಿಲ್ಲ ಹಾಗೂ ಅವರ ನಡುವೆ ಏನಾಗುತ್ತಿತ್ತು ಎಂದು ನನಗೆ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

16. ನನ್ನ ಮುಂದುಗಡೆ ಎಷ್ಟು ಜನರು ನಿಂತಿದ್ದರು ಎಂದರೆ ಸಾಕ್ಷಿಯು 20-30 ಜನರು ನಿಂತಿದ್ದರು ಎಂದು ನುಡಿಯುತ್ತಾರೆ. ಜಗಳವನ್ನು ಬಿಡಿಸಲು ನಾನು ಹೋಗಿರುವುದಿಲ್ಲ. ನಮ್ಮ ಮನೆಗೆ ಬಹಳಷ್ಟು ಜನ ಅಪರಿಚಿತರು ಬಂದು, ಹೋಗುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ತಂದೆ-ತಾಯಿ, ಹೆಂಡತಿ ಮತ್ತು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಮನೆಗೆ ಅಪರಿಚಿತರು ಬಂದು ಹೋಗುತ್ತಿದ್ದು, ಅದನ್ನು ಆರೋಪಿ ಆಕ್ಷೇಪಿಸಿದ್ದರಿಂದ, ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಜೋರಾಗಿ ದೊಣ್ಣೆಯಿಂದ ತಲೆಗೆ ಹೊಡೆದರೆ, ಆತ ಸಾಯುತ್ತಾನೆ ಎಂದರೆ ಸರಿಯಲ್ಲ. ಅಬುತಾಲಿಬ್ ಮೊದಲು ಆರೋಪಿಗೆ ಹೊಡೆದಿರುತ್ತಾನೆ ಎಂದರೆ ಸಾಕ್ಷಿಯು ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬಿಳಿಸಲು ಅಬುತಾಲಿಬ್ ರವರು ಅಡಿಕೆ ದಬ್ಬೆಯಿಂದ ಹೊಡೆದಿರುತ್ತಾರೆ ಎಂದು ನುಡಿಯುತ್ತಾರೆ. ಜಗಳ ಪ್ರಾರಂಭವಾದಾಗ ಆರೋಪಿಯ ಕೈಯಲ್ಲಿ ಚಾಕು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅಬುತಾಲಿಬ್ ರವರ ಕೈಯಲ್ಲಿಯೂ ಸಹ ಅಡಿಕೆ ದಬ್ಬೆ ಇರಲಿಲ್ಲ ಎಂದು ನುಡಿಯುತ್ತಾರೆ. ಅಬುತಾಲಿಬ್ ಮನೆಯಿಂದ ಬರುವಾಗಲೇ ದೊಣ್ಣೆಯನ್ನು ತಂದಿದ್ದರು ಎಂದರೆ ಸರಿಯಲ್ಲ. ಅಬುತಾಲಿಬ್ ಮೊದಲಿಗೆ ಆರೋಪಿಯ ತಲೆಗೆ ಹೊಡೆದಿದ್ದರಿಂದ, ಆತನಿಂದ ತಪ್ಪಿಸಿಕೊಳ್ಳಲು, ಆರೋಪಿ ಅಬುತಾಲಿಬ್ ನನ್ನು ದೂಡಿರುತ್ತಾನೆ ಎಂದರೆ ಸರಿಯಲ್ಲ.

17. ಅಬುತಾಲಿಬ್ ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾನು ಹೋಗಿರಲಿಲ್ಲ ಎಂದರೆ ಸರಿ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆಯ ಒಳಗೆ ಹೋಗಿ, ಯಾವುದೇ ಚಾಕುವನ್ನು ತಂದಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಅಬುತಾಲಿಬ್ ರವರಿಗೆ ಚಾಕು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಿಡಿಯೋವನ್ನು ನೋಡಿಲ್ಲ ಎಂದರೆ ಸರಿಯಲ್ಲ. ವಿಡಿಯೋ ಬಗ್ಗೆ ನಾನು ಪೊಲೀಸರ ಮುಂದೆ ಏನು ಹೇಳಿರುವುದಿಲ್ಲ. ಗಲಾಟೆ ನಡೆಯುವಾಗಲೀ ಅಥವಾ ಆ ನಂತರವಾಗಲೀ ನಾನು ಪೊಲೀಸರಿಗೆ ವಿಷಯವನ್ನು ತಿಳಿಸಿರುವುದಿಲ್ಲ. ಪೊಲೀಸರಿಗೆ ವಿಷಯವನ್ನು ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಮಗೆ ಅಬುತಾಲಿಬ್ ರವರ ಪರಿಚಯ ಇರುತ್ತದೆ. ಅಬುತಾಲಿಬ್ ರವರಿಗೆ ಸ್ವಲ್ಪ ಸಿಟ್ಟಿನವರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಮೃತ ಅಬುತಾಲಿಬ್ ರವರು ತನ್ನ ಮೊದಲನೇ ಹೆಂಡತಿಗೆ ಕಿರುಕುಳ ನೀಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆಕೆಯ ಮೇಲೆ ಸೀಮೆಎಣ್ಣೆ ಸುರಿದು, ಕೊಲೆ ಮಾಡಲು ಪ್ರಯತ್ನಿಸಿದ್ದ ಹಾಗೂ ಈ ಬಗ್ಗೆ ಪ್ರಕರಣ ಕೂಡ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಮೃತ ಅಬುತಾಲಿಬ್ ರವರು ತನ್ನ ಮೊದಲನೇ ಹೆಂಡತಿಗೆ ಕಿರುಕುಳ ನೀಡಿ, ಸೀಮೆಎಣ್ಣೆ ಸುರಿದು, ಕೊಲೆ ಮಾಡಲು ಪ್ರಯತ್ನಿಸಿದ್ದ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

18. ಅಬುತಾಲಿಬ್ ನ ಮನೆಯವರು ನಮ್ಮ ಮನೆಯಿಂದ ನೀರು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ. ಆದ್ದರಿಂದ ಅಬುತಾಲಿಬ್ ನಮ್ಮ ಮಾತು ಕೇಳುತ್ತಿದ್ದ ಎಂದರೆ ಸರಿಯಲ್ಲ. ನಮ್ಮ ಕಷ್ಟ-ಸುಖಗಳಿಗೆ ಅಬುತಾಲಿಬ್ ರವರು ಬರುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಕೇರಿಯ ಎಲ್ಲರ ಸಹಾಯಕ್ಕೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಅಬುತಾಲಿಬ್ ನನ್ನ ಮಾತು ಕೇಳುತ್ತಿದ್ದ ಕಾರಣ, ಆತನ ಮೂಲಕ ಜಗಳ ಮಾಡಿಸಿ, ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು-7 ರಿಂದ ಅಬುತಾಲಿಬ್ ಆರೋಪಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಅಬುತಾಲಿಬ್ ತಾನು ಮನೆಯಿಂದ ಬರುವಾಗಲೇ ಬೇರೊಂದು ದಪ್ಪವಾದ ದೊಣ್ಣೆಯನ್ನು ತಂದಿದ್ದರು ಎಂದರೆ ಸರಿಯಲ್ಲ. ಆರೋಪಿ ನಮಗೂ ಸಹ ನಿಮ್ಮನ್ನು ಬಿಡುವುದಿಲ್ಲ ಎಂದು ಹೆದರಿಸಿರುತ್ತಾನೆ ಎಂದು ಪೊಲೀಸರ ಮುಂದೆ

ಹೇಳಿರುತ್ತೇನೆ.ವಿಡಿಯೋಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ